# ಸಂಪಾದಕೀಯ

# ಮೌಲ್ಯವಂತ ಜೀವನ

## ಎಲ್ಲವೂ ಅರ್ಥಪೂರ್ಣ

ಈ ಪ್ರಪಂಚದಲ್ಲಿ ಎಲ್ಲ ವಸ್ತುಗಳಿಗೂ ಒಂದು ಮೌಲ್ಯವಿದೆ, ಯಾವುದೂ ವ್ಯರ್ಥವಾದುದಲ್ಲ. ಎಷ್ಟೋ ವಸ್ತುಗಳು ನಮಗೆ ಕೆಲಸಕ್ಕೆ ಬಾರದವು ಎಂದು ಕಂಡುಬರಬಹುದು. ಆದರೆ ಪೂರ್ಣತೆಯ ದೃಷ್ಟಿಯಿಂದ ನೋಡಿದಾಗ ಎಲ್ಲಕ್ಕೂ ಒಂದು ಅರ್ಥವಿರುವಂತೆ ಕಂಡುಬರುತ್ತದೆ. ಒಂದು ಚಿತ್ರವನ್ನು ನೋಡಿದಾಗ ಅದರಲ್ಲಿ ಕೆಲವು ಗೆರೆಗಳು ಅನಾವಶ್ಯಕ ಎಂದೆನಿಸಬಹುದು. ಆದರೆ ಒಟ್ಟು ಚಿತ್ರದ ದೃಷ್ಟಿಯಿಂದ ಎಲ್ಲ ಗೆರೆಗಳಿಗೂ, ವರ್ಣವಿನ್ಯಾಸಕ್ಕೂ ಅರ್ಥವಿರುವಂತೆ ಕಂಡುಬರುತ್ತದೆ. ‘ಯಾವುದನ್ನು ನೀನು ಇಷ್ಟಪಡದೆ ಕೆಡುಕೆಂದು ಎಸೆಯುತ್ತೀಯೋ ಅದು ಯಾರಿಂದಲಾದರೂ ಅಥವಾ ಯಾವುದರಿಂದಲಾದರೂ ಒಳ್ಳೆಯದೆಂದು ಸ್ವೀಕರಿಸಲ್ಪಡುತ್ತದೆ’ (*The Book of Mirdad*).

ಆದರೆ ಬಹುಪಾಲು ಮಾನವರನ್ನು ನೋಡಿದಾಗ ಅವರ ಜೀವನ ವ್ಯರ್ಥ ಎಂದು ಕಂಡುಬರುತ್ತದೆ—ನಮಗೆ ಮಾತ್ರವಲ್ಲ ಅವರಿಗೂ ಹಾಗೇ ಅನ್ನಿಸುತ್ತಿರುತ್ತದೆ. ‘ಮಾನವ ಜನ್ಮ ದೊಡ್ಡದು’ ಎಂದು ಪುರಂದರದಾಸರು ಹಾಡಿದರು. ‘ಸೃಷ್ಟಿಯುಲ್ಲೆಲ್ಲ ಮಾನವನೇ ಅತ್ಯಂತ ಶ್ರೇಷ್ಠನು’ ಎಂದು ಸ್ವಾಮಿ ವಿವೇಕಾನಂದರು ಘೋಷಿಸಿದರು. ಆದರೂ ಕೂಡ ಒಂದು ಹಸುವೂ ‘ನೀನಾರಿಗಾದೆಯೋ ಎಲೆ ಮಾನವ’ ಎಂದು ಮೂದಲಿಸುತ್ತದೆ.

> **ಎಲ್ಲಕ್ಕೂ ಅರ್ಥವನ್ನು ಕೊಡುವ ಮಾನವನೇ ನಿರರ್ಥಕನಾಗಿ ಉಳಿಯುತ್ತಾನೆ !**

ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಾರೆ: ಗುರುವು ಶಿಷ್ಯನಿಗೆ ‘ನಿನಗಿಂತ ಕೀಳಾದ ಒಂದು ವಸ್ತುವನ್ನು ಹುಡುಕಿ ಕೊಂಡು ಬಾ’ ಎನ್ನುತ್ತಾನೆ. ಶಿಷ್ಯನು ಎಷ್ಟೇ ಹುಡುಕಿದರೂ ತನಗಿಂತ ಕೀಳಾದುದು ಯಾವುದೂ ಅವನಿಗೆ ಕಂಡುಬರಲಿಲ್ಲ—ತಾನೇ ಎಲ್ಲದಕ್ಕಿಂತ ಕೀಳಾದವನೆಂದು ಅವನಿಗನಿಸಿತು. ಕೊನೆಗೆ ಒಂದು ಕಡೆ ಮಾನವನ ಹೇಸಿಗೆಯನ್ನು ನೋಡುತ್ತಾನೆ. ಇದಕ್ಕಿಂತ ಕೀಳಾದುದು ಯಾವುದೂ ಇರಲಾರದು, ಮಾನವರು ಕೂಡ ಇದನ್ನು ನೋಡಿ ಅಸಹ್ಯ ಪಡುತ್ತಾರೆ—ಎಂದು ಅದನ್ನು ತೆಗೆದುಕೊಂಡು ಹೋಗಿ ಗುರುವಿಗೆ ಕೊಡಬೇಕೆಂದು ಶಿಷ್ಯನು ಕೈಚಾಚಿದನು. ಕೂಡಲೆ ಅದರಿಂದ ಒಂದು ಧ್ವನಿ ಕೇಳಿ ಬಂತು: ‘ನೀಚ, ತೊಲಗಾಚೆ. ನನಗೆ ಈ ಸ್ಥಿತಿ ಬಂದಿರುವುದೇ ನಿನ್ನ (ಮಾನವ)ಸಂಪರ್ಕದಿಂದಾಗಿ. ಅದಕ್ಕೆ ಮೊದಲು ನಾನು ಅತ್ಯಂತ ಸ್ವಾದ್ಯವಾದ, ಪರಿಮಳಭರಿತವಾದ ವಸ್ತುವಾಗಿದ್ದೆ. ನನ್ನ ಈ ಸ್ಥಿತಿಗೆ ನೀನೇ ಕಾರಣ.’ ಇದನ್ನು ಕೇಳಿ ಶಿಷ್ಯನು ತನಗಿಂತ ಕೀಳಾದುದು ಯಾವುದೂ ಇಲ್ಲವೆಂದು ಹಿಂದಿರುಗಿದನು.

## ಮಾನವನಿಂದ ಎಲ್ಲವೂ ಅರ್ಥವನ್ನು ಪಡೆಯುತ್ತದೆ

ಹಾಗಾದರೆ ಮನುಷ್ಯಜೀವನಕ್ಕೆ ಅರ್ಥವೇ ಇಲ್ಲವೇ? ಭೂಮಂಡಲವನ್ನೇ ಆಳುತ್ತಿರುವ, ಪ್ರಕೃತಿಶಕ್ತಿಯನ್ನು ವಶಪಡಿಸಿಕೊಂಡಿರುವ ಅರ್ಥವಿಲ್ಲದ ವ್ಯರ್ಥ ಜೀವನವೇ ಅವನದು? ಜನಜೀವನದ ಸಾಮಾನ್ಯ ನೋಟವು ನಿರಾಶಾದಾಯಕವಾದರೂ, ನಾವು ಸರಿಯಾಗಿ ವಿಚಾರಿಸಿ ನೋಡಿದಾಗ ಮಾನವ ಜೀವನ ಅರ್ಥಪೂರ್ಣವಾದುದಾಗಿ ಕಂಡುಬರುತ್ತದೆ. ಏಕೆಂದರೆ ಅವನಿಂದಾಗಿಯೇ ಈ ಪ್ರಪಂಚದ ಎಲ್ಲವೂ ತಮ್ಮ ಮೌಲ್ಯವನ್ನು ಪಡೆಯುತ್ತವೆ. ಹಣಕ್ಕೆ ಮೌಲ್ಯವಿರುವುದು ಮಾನವನಿಂದಾಗಿ, ದಿನಬಳಕೆಯ ವಸ್ತುಗಳು ಮೌಲ್ಯವನ್ನು ಪಡೆಯುವುದು ಮಾನವನಿಂದಾಗಿ, ‘ನೀನಾರಿಗಾದೆಯೋ ಎಲೆ ಮಾನವ’ ಎಂದು ಮೂದಲಿಸುವ ಹಸುವೂ ಮೌಲ್ಯವನ್ನು ಪಡೆಯುವುದು ಮಾನವನಿಂದಾಗಿ. ಸ್ವಾಮಿ ವಿವೇಕಾನಂದರು ಆಲ್ಪ್ಸ್ ಪರ್ವತವನ್ನು ನೋಡಲು ಹೋದಾಗ, ‘ಆಲ್ಪ್ಸ್ ಪರ್ವತವು ನನಗೆ ಕೃತಜ್ಞವಾಗಿರಬೇಕು, ಏಕೆಂದರೆ ಅದಕ್ಕೆ ಸೌಂದರ್ಯವನ್ನು ನೀಡಿರುವವನು ನಾನು’ ಎಂದರು. ಮಾನವನು ಅದಕ್ಕೆ ಸೌಂದರ್ಯವನ್ನು ಆರೋಪಿಸದಿದ್ದರೆ ಅದು ಯಾರ ಪಾಲಿಗೆ ಸುಂದರವಾಗಿರುತ್ತದೆ?

ಪ್ರಾಣಿಗಳು ಅದರ ಸೌಂದರ್ಯವನ್ನು ಸವಿಯುವುವೋ ಇಲ್ಲವೋ ನಮಗೆ ತಿಳಿಯದು. ದೇವತೆಗಳ ವಿಷಯವೂ ನಮಗೆ ತಿಳಿಯದು. ನಮಗೆ ತಿಳಿದಿರುವಂತೆ ಎಲ್ಲ ವಸ್ತುಗಳಿಗೂ ಸೌಂದರ್ಯವನ್ನು ನೀಡುವವನು ಮಾನವ. ಹೀಗೆ ಎಲ್ಲ ವಸ್ತುಗಳೂ ತಮ್ಮ ಮೌಲ್ಯವನ್ನು ಪಡೆಯುವುದು ಮಾನವನಿಂದಾಗಿ. ಪ್ರಾಣಿಗಳು ಮತ್ತು ಸಸ್ಯಗಳೂ ಸಂಗೀತವನ್ನು ಸವಿಯುತ್ತವೆ ಎಂದು ಹೇಳುತ್ತಾರೆ. ಆದರೆ ಆ ಸಂಗೀತವನ್ನು ರೂಪಿಸಿದವನು ಮಾನವನೇ ತಾನೆ! ಆದ್ದರಿಂದಲೇ ಗ್ರೀಕ್ ತತ್ತ್ವಜ್ಞಾನಿಗಳಾದ ಸೋಫಿಸ್ಟರು, ಮಾನವನೇ ಎಲ್ಲದರ ಮಾನದಂಡ (*Man is the measure of everything*) ಎಂದು ಹೇಳುತ್ತಿದ್ದರು. (ಈಗ ಮಾನವನೇ ಅವನು ಹೊಂದಿರುವ ಇತರ ವಸ್ತುಗಳಿಂದ ಅಳೆಯಲ್ಪಡುವ ಸ್ಥಿತಿಗೆ ಇಳಿದಿರುವುದು ಶೋಚನೀಯ.) ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ, **ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ**—ಆತ್ಮನ (ತನ್ನ) ಸಲುವಾಗಿ ಎಲ್ಲವೂ ಪ್ರಿಯವಾಗುತ್ತವೆ ಎಂದು. ಆದ್ದರಿಂದ ಮಾನವನು ತನ್ನ ಕೀಳರಿಮೆಯನ್ನು ದೂರಮಾಡಿ ಆತ್ಮವಿಶ್ವಾಸದಿಂದ ತನ್ನ ಜೀವನದಲ್ಲಿ ಒಂದು ಅರ್ಥವನ್ನು ಕಂಡುಕೊಳ್ಳಬೇಕು.

## ಆದರ್ಶದ ಆವಶ್ಯಕತೆ

ಜೀವನದಲ್ಲಿ ಒಂದು ಆದರ್ಶವಿದ್ದರೆ ಆಗ ಅದು ಅರ್ಥಪೂರ್ಣವಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಒಬ್ಬ ವ್ಯಕ್ತಿಯು ಒಂದು ಆದರ್ಶವಿಟ್ಟುಕೊಂಡು ಒಂದು ಸಾವಿರ ತಪ್ಪುಗಳನ್ನು ಮಾಡಿದರೆ ಆದರ್ಶವಿಲ್ಲದೆ ಐವತ್ತುಸಾವಿರ ತಪ್ಪುಗಳನ್ನು ಮಾಡುತ್ತಾನೆ.' (ವ್ಯಕ್ತಿತ್ವ ನಿರ್ಮಾಣ, ಪು. ೭೪). ಒಬ್ಬ ಚಿತ್ರಕಾರನು ಚಿತ್ರವನ್ನು ಬಿಡಿಸುವುದಕ್ಕೆ ಮುಂಚೆ ತಾನು ಬಿಡಿಸಬೇಕಾದ ಚಿತ್ರದ ಪೂರ್ಣ ಕಲ್ಪನೆಯನ್ನು ಮನಸ್ಸಿನಲ್ಲಿ ಮಾಡುತ್ತಾನೆ. ಆ ಚಿತ್ರ ಹೇಗಿರಬೇಕು, ಯಾವ ಯಾವ ಬಣ್ಣ ಎಲ್ಲೆಲ್ಲಿ ಬರಬೇಕು, ಚಿತ್ರ ಯಾವ ವಿಷಯವಸ್ತುವನ್ನು ಪ್ರತಿನಿಧಿಸಬೇಕು—ಎಂದು ಮನಸ್ಸಿನಲ್ಲೇ ಒಂದು ಚಿತ್ರವನ್ನು ರೂಪಿಸುತ್ತಾನೆ. ಅನಂತರ ಅವನು ಕುಂಚವನ್ನು ತೆಗೆದುಕೊಂಡು ಚಿತ್ರ ಬರೆಯಲು ಪ್ರಾರಂಭಿಸುತ್ತಾನೆ. ಹಾಗೆಯೇ ನಾವೂ ಕೂಡ ಒಂದು ಆದರ್ಶವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು, ಅದು ಪ್ರಜ್ವಲಿಸುವ ದೀಪದಂತಿರಬೇಕು, ಅದರ ಬೆಳಕು ನಮ್ಮೆಲ್ಲ ಮಾತು ಕೃತಿ ಆಲೋಚನೆಗಳನ್ನು ಬೆಳಗುತ್ತಿರಬೇಕು. ಹೀಗೆ ನಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಉನ್ನತ ಆದರ್ಶ ಮೆಟಲ್ ಡಿಟೆಕ್ಟರ್ ಇದ್ದಹಾಗೆ. ನಮ್ಮ ಎಲ್ಲ ಮಾತು ಕೃತಿ ಆಲೋಚನೆಗಳೂ ಈ ಮೆಟಲ್ ಡಿಟೆಕ್ಟರ್ ಮೂಲಕ ಹಾದುಹೋಗಬೇಕು. ಅವುಗಳಲ್ಲಿ ಆದರ್ಶಕ್ಕೆ ವಿರುದ್ಧಾಂಶಗಳೇನೇ ಇದ್ದರೂ ಅದು ಪತ್ತೆ ಹಚ್ಚಬೇಕು.

## ಮೌಲ್ಯವಂತ ಜೀವನದ ಆವಶ್ಯಕತೆ

ಇಂತಹ ಆದರ್ಶಪೂರ್ಣಜೀವನ ನಮ್ಮ ಬದುಕಿಗೆ ಒಂದು ಮೌಲ್ಯವನ್ನು ನೀಡುತ್ತದೆ. ಬದುಕು ಮೌಲ್ಯವಂತವಾಗಿರುವುದು ಹೇಗೆ ಆವಶ್ಯಕ ಎಂಬುದರ ಬಗ್ಗೆ ಪ್ರಸಿದ್ಧ ಮನಶ್ಶಾಸ್ತ್ರಜ್ಞ ಎಂ. ಸ್ಕಾಟ್ ಪೆಕ್ ಹೀಗೆ ಹೇಳುತ್ತಾನೆ: 'ತನ್ನ ಜೀವನಕ್ಕೆ ಒಂದು ಮೌಲ್ಯವಿದೆ ಎಂಬ ಭಾವನೆ ಜೀವನವನ್ನು ಶಿಸ್ತುಗೊಳಿಸುವ ಅತ್ಯಂತ ಪ್ರಮುಖ ಸಾಧನ. ಏಕೆಂದರೆ ಈ ಭಾವನೆಯಿಂದಾಗಿ ವ್ಯಕ್ತಿಯು ಎಲ್ಲ ರೀತಿಯಲ್ಲಿಯೂ ತನ್ನನ್ನು ತಾನು ಸರಿಯಾಗಿ ನೋಡಿಕೊಳ್ಳುತ್ತಾನೆ' (*The Road Less Travelled*). ಇಲ್ಲದಿದ್ದರೆ ವ್ಯಕ್ತಿಯು ತನ್ನ ಜೀವನವನ್ನು ವ್ಯರ್ಥಗೊಳಿಸುತ್ತಾನೆ. ಯಾವ ವಸ್ತುವಿಗೆ ಮೌಲ್ಯವಿಲ್ಲವೊ ಅದನ್ನು ನಾವು ಇಟ್ಟುಕೊಳ್ಳುವುದಿಲ್ಲ, ಬಿಸಾಕುತ್ತೇವೆ. ಹಣಕ್ಕೆ ಮೌಲ್ಯವಿರುವುದರಿಂದ ಅದನ್ನು ಅಷ್ಟೊಂದು ಜೋಪಾನವಾಗಿ ಇಟ್ಟುಕೊಳ್ಳುತ್ತೇವೆ. ಅದರ ಅಪಮೌಲ್ಯ(*devaluation*) ಉಂಟಾದರೆ ಅದನ್ನು ತೆಗೆದುಕೊಂಡು ಹೋಗಿ ನೀರಿಗೆ ಎಸೆಯುತ್ತೇವೆ—ಅಥವಾ ನೀರನ್ನು ಕಲುಷಿತಗೊಳಿಸುವುದು ಬೇಡವೆಂದು ಅದನ್ನು ಸುಟ್ಟು ಹಾಕುತ್ತೇವೆ. ಹಾಗೆಯೇ ವ್ಯಕ್ತಿಗಳು ತಮ್ಮ ಜೀವನದಲ್ಲಿ ಯಾವ ಅರ್ಥವನ್ನೂ ಕಂಡುಕೊಳ್ಳದಿದ್ದರೆ ಅದನ್ನು ವ್ಯರ್ಥಗೊಳಿಸುತ್ತಾರೆ—ಯೇ ಕೇ ಚಾತ್ಮಹನೋ ಜನಾಃ—ತಮ್ಮ ಆತ್ಮಹಾನಿಯನ್ನು ತಾವೇ ಮಾಡಿಕೊಳ್ಳುತ್ತಾರೆ. ಕಾಡುಹರಟೆ, ಅತಿಯಾದ ಇಂದ್ರಿಯಸುಖ, ದುಶ್ಚಟಗಳು ಇತ್ಯಾದಿಗಳು ಜೀವನವನ್ನು ವ್ಯರ್ಥಗೊಳಿಸುವ ವಿಧಾನಗಳು. ಪ್ರಸಿದ್ಧ ಸಂಸ್ಕೃತ ಶ್ಲೋಕವು ಹೀಗೆ ಹೇಳುತ್ತದೆ :

**ಕಾವ್ಯಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಮ್ ।**
**ವ್ಯಸನೇನ ಚ ಮೂರ್ಖಾಣಾಂ ನಿದ್ರಯಾ ಕಲಹೇನ ವಾ ॥**

'ಜ್ಞಾನಿಗಳು ಕಾವ್ಯ ಮತ್ತು ಶಾಸ್ತ್ರಚರ್ಚೆಯ ಆನಂದದಲ್ಲಿ ಕಾಲ ಕಳೆಯುತ್ತಾರೆ. ಮೂರ್ಖರಾದರೊ ದುಶ್ಚಟಗಳು, ನಿದ್ರೆ ಅಥವಾ ಕಲಹಗಳಲ್ಲಿ ಕಾಲ ಕಳೆಯುತ್ತಾರೆ.'

ಯಾವಾಗ ಜನರು ತಮ್ಮ ಜೀವನದಲ್ಲಿ ಮೌಲ್ಯವನ್ನು ಕಾಣುವುದಿಲ್ಲವೊ ಇತರರ ಜೀವನಕ್ಕೂ ಅವರು ಬೆಲೆಯನ್ನು ಕೊಡುವುದಿಲ್ಲ. ಇದರ ಪರಿಣಾಮವೇ ವಿಧ್ವಂಸಕ ಕೃತ್ಯ—ಭಯೋತ್ಪಾದಕ ಕೃತ್ಯಗಳು, ಕೋಮು ಗಲಭೆಗಳು ಇತ್ಯಾದಿ. ಧರ್ಮ, ಜನಾಂಗ, ಪ್ರಾಂತ, ಭಾಷೆ ಹೀಗೆ ಯಾವುದಾದರೂ ನೆಪ ಮಾಡಿಕೊಂಡು ಇತರರನ್ನು ಹಿಂಸಿಸಲು,ಕೊಲ್ಲಲು ಜನ ಉದ್ಯುಕ್ತರಾಗುತ್ತಾರೆ. ಎರಿಕ್ ಫ್ರೋಮ್ ಎಂಬ ಮನಶ್ಶಾಸ್ತ್ರಜ್ಞನು ಹೇಳುತ್ತಾನೆ, 'ವಿಧ್ವಂಸಕ ಕೃತ್ಯ ಅಸಾರ್ಥಕ ಜೀವನದ ಪರಿಣಾಮ' (Violence is the outcome of unlived life) ಎಂದು.

**ತನ್ನನ್ನು ಪ್ರೀತಿಸುವವನು**
**ಇತರರನ್ನೂ ಪ್ರೀತಿಸುತ್ತಾನೆ ;**
**ತನ್ನನ್ನು ದ್ವೇಷಿಸುವವನು**
**ಇತರರನ್ನೂ ದ್ವೇಷಿಸುತ್ತಾನೆ.**

ಇಂದಿನ ಯುವಕರು ಜೀವನದ ಅರ್ಥವನ್ನು ಕಾಣದಿರುವುದರಿಂದಲೇ ಮಾನಸಿಕ ದುಗುಡ, ದುರ್ವ್ಯಸನಗಳು, ವಿಧ್ವಂಸಕ ಕೃತ್ಯಗಳು ಇವು ವೃದ್ಧಿಯಾಗುತ್ತಿರುವುದು. ಕಾರ್ಲ್ ಯುಂಗ್ ಹೇಳುತ್ತಾನೆ: 'ನನ್ನೆಡೆಗೆ ಬರುವ ಮೂರನೆ ಒಂದು ಭಾಗ ಮನೋರೋಗಿಗಳು ವೈದ್ಯಕೀಯವಾಗಿ ವಿವರಿಸಬಹುದಾದ ಯಾವುದೇ ರೋಗದಿಂದಲೂ ನರಳುತ್ತಿಲ್ಲ, ಆದರೆ ಜೀವನದ ಅರ್ಥಹೀನತೆಯಿಂದ ಶೂನ್ಯತೆಯಿಂದ ನರಳುತ್ತಿರುವರು.'

## ಅಸ್ತಿತ್ವಶೂನ್ಯತೆ

ಜೀವನದ ಈ ಶೂನ್ಯತೆಯನ್ನು ವಿಕ್ಟರ್ ಇ. ಫ್ರಾಂಕಲ್ ಎಂಬ ಮನಶ್ಶಾಸ್ತ್ರಜ್ಞನು 'ಅಸ್ತಿತ್ವ ಶೂನ್ಯತೆ' (*Existential vacuum*) ಎಂದು ಕರೆಯುತ್ತಾನೆ. ಅವನ ಪ್ರಕಾರ ಈ ಅಸ್ತಿತ್ವ ಶೂನ್ಯತೆಯು ಬೇರೆ ಬೇರೆ ಮುಖವಾಡವನ್ನು ಹಾಕಿಕೊಂಡು ಕಾಣಿಸಿಕೊಳ್ಳುತ್ತದೆ. ತೀವ್ರ ಅಧಿಕಾರೇಚ್ಛೆ, ಧನಲಾಲಸೆ, ಅತೀವ ಭೋಗಾಸಕ್ತಿ ಇವೂ ಅಸ್ತಿತ್ವಶೂನ್ಯತೆಯ ಮುಖವಾಡಗಳೆಂದು ಅವನು ಅಭಿಪ್ರಾಯಪಡುತ್ತಾನೆ. ಪ್ರತಿಯೊಬ್ಬನಲ್ಲಿಯೂ ಜೀವನದಲ್ಲಿ ಅರ್ಥವನ್ನು ಕಾಣುವ ಪ್ರವೃತ್ತಿ (*Will to meaning*) ಇರುತ್ತದೆ ಮತ್ತು ಅದೇ ಅವನ ಜೀವನದ ಪ್ರಧಾನ ಪ್ರವರ್ತಕ ಶಕ್ತಿ ಎಂದು ಅವನು ಹೇಳುತ್ತಾನೆ. ಈ ಅರ್ಥೇಚ್ಛೆಯು, ಅನೇಕ ಸಾಮಾಜಿಕ ಕಾರಣಗಳಿಂದಾಗಿ, ಅದುಮಿಡಲ್ಪಟ್ಟಾಗ ಅದು ಬೇರೆ ಬೇರೆ ಮುಖವಾಡಗಳನ್ನು ಧರಿಸಿಕೊಂಡು ವ್ಯಕ್ತವಾಗುತ್ತದೆ. ಇದರ ಆಧಾರದ ಮೇಲೆಯೆ ಲೋಗೋಥೆರಪಿ (*Logotherapy*) ಎಂಬ ಮನಶ್ಶಾಸ್ತ್ರ ಸಿದ್ಧಾಂತವನ್ನು ಅವನು ಪ್ರತಿಪಾದಿಸಿದನು. ಲೋಗೋಥೆರಪಿ ಎಂದರೆ ಅರ್ಥಕೇಂದ್ರಿತ ಮಾನಸಿಕ ಚಿಕಿತ್ಸೆ (ನೋಡಿ, *Man's Search for Meaning*).

ಜೀವನವು ಅರ್ಥಪೂರ್ಣವಾದಾಗ ಜೀವನದಲ್ಲಿ ಸಂಭವಿಸುವ ಪ್ರತಿಯೊಂದಕ್ಕೂ ಒಂದು ಅರ್ಥ ಬರುತ್ತದೆ. ನಾವು ಒಂದು ಚಿತ್ರವನ್ನು ನೋಡಿದಾಗ ಅದು ಯಾವ ವಿಷಯವನ್ನು ಪ್ರತಿನಿಧಿಸುತ್ತದೆ, ಅದರ ಅರ್ಥವೇನು ಎಂಬುದು ಮೊದಲು ನಮಗೆ ತಿಳಿಯದಿರಬಹುದು. ಆಗ ಅದರಲ್ಲಿ ಕಾಣುವ ಎಲ್ಲ ರೇಖೆಗಳೂ ಬಣ್ಣಗಳೂ ಅರ್ಥಶೂನ್ಯವಾಗಿ ನಮಗೆ ಕಂಡುಬರಬಹುದು. ಯಾವಾಗ ಒಟ್ಟು ಚಿತ್ರದ ಅರ್ಥ ನಮಗೆ ತಿಳಿದು ಬರುತ್ತದೊ ಆಗ ಅದರಲ್ಲಿ ಬರುವ ಪ್ರತಿಯೊಂದು ರೇಖೆಯೂ ವರ್ಣವಿನ್ಯಾಸವೂ ಅರ್ಥಪೂರ್ಣವಾಗಿ ಕಂಡುಬರುತ್ತದೆ. ಹಾಗೆಯೇ ಜೀವನವೂ ಅರ್ಥಪೂರ್ಣವಾದಾಗ ಯಾವ ಘಟನೆಯೂ ಅನರ್ಥವೆನಿಸುವುದಿಲ್ಲ, ನಾವು ಅನುಭವಿಸುವ ತೀವ್ರ ದುಃಖವೂ ಅರ್ಥಪೂರ್ಣವಾಗುತ್ತದೆ. ಆಗ ಆ ದುಃಖವು ತನ್ನ ತೀವ್ರತೆಯನ್ನು ಕಳೆದುಕೊಳ್ಳುತ್ತದೆ. ಜೀವನ ಅರ್ಥಪೂರ್ಣವಾದಾಗ ಸುಖದುಃಖಗಳೆಲ್ಲವನ್ನೂ ಆ ಅರ್ಥಸಾಧನೆಗೆ ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

**ತಾನು ಏಕೆ ಬದುಕುತ್ತೇನೆ ಎಂದು ತಿಳಿದರೆ,**
**ಹೇಗೆ ಬದುಕುವುದೆಂಬುದು**
**ಸ್ವಾಭಾವಿಕವಾಗಿಯೇ ತಿಳಿಯುತ್ತದೆ.**

—ನೀಷೇ

## ದಿವ್ಯತೆಯ ಅಭಿವ್ಯಕ್ತಿ

ಜೀವನವು ಯಾವಾಗ ಅರ್ಥಪೂರ್ಣವಾಗುತ್ತದೆ? ಅದರ ಮೌಲ್ಯ ಯಾವುದಕ್ಕಾಗಿದೆ? ಪ್ರಾಪಂಚಿಕ ವಿಷಯವನ್ನು ಪಡೆಯುವುದಕ್ಕಾಗಿಯೆ? ಜೀವನವನ್ನು ಅದಕ್ಕಾಗಿ ಉಪಯೋಗಿಸುವುದೆಂದರೆ ಒಂದು ನೂರು ರೂಪಾಯಿ ಕೊಟ್ಟು ಒಂದು ಪಿನ್ನನ್ನು ಕೊಂಡುಕೊಂಡಂತೆ. ಏಕೆಂದರೆ ಪ್ರಾಪಂಚಿಕ ವಿಷಯಗಳೆಲ್ಲಕ್ಕಿಂತ ಈ ಜೀವನವು ಬಹುಮೂಲ್ಯವಾದುದು—ಎಲ್ಲದಕ್ಕೂ ಮೌಲ್ಯವನ್ನು ನೀಡುವುದೇ ಈ ಜೀವನ ಎಂಬುದನ್ನು ನಾವು ಮೊದಲೇ ನೋಡಿದೆವು. ಜೀವನವನ್ನು ಅದಕ್ಕಿಂತಲೂ ಶ್ರೇಷ್ಠವಾದುದನ್ನು ಪಡೆಯಲು ಉಪಯೋಗಿಸಿದಾಗಲೇ, ಅದು ಸಾರ್ಥಕವಾಗುತ್ತದೆ. ಪ್ರತಿಯೊಂದು ವಸ್ತುವಿಗೂ ಅದರದೇ ಆದ ಉದ್ದೇಶವಿರುತ್ತದೆ, ಅರ್ಥವಿರುತ್ತದೆ. ಅದನ್ನು ಅದಕ್ಕಾಗಿಯೇ ಉಪಯೋಗಿಸಿದಾಗ ಮಾತ್ರ ಅದು ಸಾರ್ಥಕವಾಗುತ್ತದೆ. ಒಂದು ಬೀಜವನ್ನು ತಿನ್ನುವುದಕ್ಕೋ ಅಲಂಕಾರಕ್ಕೋ ಆಟಕ್ಕಾಗಿಯೋ ಉಪಯೋಗಿಸಬಹುದು. ಆದರೆ ಅದರ ನಿಜವಾದ ಉದ್ದೇಶ ಸಫಲವಾಗುವುದು ಅದನ್ನು ಬಿತ್ತಿ ಮರವಾಗಿ ಬೆಳೆಯಲು ಅವಕಾಶ ಕೊಟ್ಟಾಗ. ಮೇಜು ಇರುವುದು ಓದು ಬರೆಯುವುದಕ್ಕಾಗಿ. ಅದನ್ನು ಮೇಲೆ ಹತ್ತಿ ಬಲೆ ತೆಗೆಯುವುದಕ್ಕೂ ಉಪಯೋಗಿಸಬಹುದು. ಆಗ ಅದರ ಉದ್ದೇಶ ಸಫಲವಾಗುವುದಿಲ್ಲ. ಹಾಗೆಯೇ ಜೀವನವೂ ಸಫಲತೆಯನ್ನು ಪಡೆಯುವುದು ಅದರ ನೈಜ ಉದ್ದೇಶಕ್ಕಾಗಿ ಅದನ್ನು ಬಳಸಿದಾಗ. ತನ್ನ ಸಾರವನ್ನು ಅಭಿವ್ಯಕ್ತಪಡಿಸಲು ಅವಕಾಶ ದೊರೆತಾಗ ಬೀಜವು ಸಾರ್ಥಕತೆಯನ್ನು ಪಡೆಯುವಂತೆ ನಮ್ಮ ವ್ಯಕ್ತಿತ್ವದ ಸಾರವಸ್ತುವನ್ನು ಅಭಿವ್ಯಕ್ತಪಡಿಸಿದಾಗ ಜೀವನ ಸಾರ್ಥಕತೆಯನ್ನು ಪಡೆಯುತ್ತದೆ. ನಮ್ಮ ವ್ಯಕ್ತಿತ್ವದ ಸಾರ ಯಾವುದು? ಪ್ರತಿಯೊಂದು ಜೀವಿಯೂ ದಿವ್ಯಾಂಶಸಂಭೂತ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಈ ಆಂತರಿಕ ದಿವ್ಯತೆಯನ್ನು ವ್ಯಕ್ತಪಡಿಸಿದಾಗಲೇ ಜೀವನವು ಸಾರ್ಥಕತೆಯನ್ನು ಪಡೆಯುತ್ತದೆ.

## ಮಾನವನ ಅಪೂರ್ವ ಸಾಮರ್ಥ್ಯ

ಮಾನವನು ತನ್ನ ದಿವ್ಯತೆಯನ್ನು ವ್ಯಕ್ತಪಡಿಸಿ ದೈವತ್ವಕ್ಕೇರುವ ಸಾಮರ್ಥ್ಯವನ್ನು ಪಡೆದಿರುವನು. ಪ್ರಕೃತಿ ಅವನಿಗೆ ಆ ಸಾಮರ್ಥ್ಯವನ್ನು ಕೊಟ್ಟಿದೆ. ಸುದೀರ್ಘವಿಕಾಸದ ಪ್ರಕ್ರಿಯೆಯ ಮೂಲಕ ಅವನ ದೇಹೇಂದ್ರಿಯ ಮನಸ್ಸುಗಳು ಪರಿಪಕ್ವತೆಯನ್ನು ಪಡೆದು ಮುಂದಿನ ಹಂತವಾದ ದೈವತ್ವಕ್ಕೇರುವ, ಬೇರೆ ಯಾವ ಜೀವವರ್ಗಕ್ಕೂ ಇಲ್ಲದ, ಅಪೂರ್ವ ಸಾಮರ್ಥ್ಯವನ್ನು ಅವನು ಪಡೆದಿರುವನು. ಒಂದು ಸಂಸ್ಕೃತ ಶ್ಲೋಕ ಹೀಗೆ ಹೇಳುತ್ತದೆ :

> ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ ।
> ಪಾರಂ ದುಃಖೋದಧೇಃ ಗಂತುಂ ತರ ಯಾವನ್ನ ಭಿದ್ಯತೇ ॥

'ಮಹತ್ತರವಾದ ಪುಣ್ಯವನ್ನು ತೆತ್ತು ಈ ದೇಹವೆಂಬ ನೌಕೆಯನ್ನು ಪಡೆದಿದ್ದಾಗಿದೆ. ಇದು ಮುರಿದುಹೋಗುವುದಕ್ಕೆ ಮುಂಚೆ ಈ ದುಃಖಸಾಗರವನ್ನು ದಾಟು.'

ಮಾನವನಿಗೆ ತನ್ನಲ್ಲಿರುವ ಈ ಅಪೂರ್ವ ಸಾಮರ್ಥ್ಯದ ಅರಿವು ಉಂಟಾಗುವುದು ಅತ್ಯಾವಶ್ಯಕ. ಇಲ್ಲದಿದ್ದರೆ ಅವನು ಪರಿಸರದೊಡನೆ ಹೊಂದಿಕೊಂಡು ತನ್ನನ್ನು ತಾನೇ ಮರೆತುಬಿಡುತ್ತಾನೆ. ಪರಿಸರದೊಡನೆ ಹೊಂದಾಣಿಕೆಯೇ ವಿಕಾಸದ ಹಿಂದಿರುವ ಮೂಲತತ್ತ್ವ ಎಂಬ ಕಲ್ಪನೆ ಹಿಂದಿತ್ತು. ಪರಿಸರದೊಡನೆ ಹೊಂದಾಣಿಕೆಗಾಗಿಯೆ ಜೀವಿಗಳು ಸಮರ್ಥ ಅಂಗಾಂಗಳನ್ನು ಪಡೆಯುತ್ತವೆ. ಈ ರೀತಿ ಹೊಂದಿಕೊಳ್ಳಲಾಗದುವು ನಾಶ ಹೊಂದುತ್ತವೆ. ಆದರೆ ವಿಕಾಸದ ಹೊಸ ಸಿದ್ಧಾಂತದ ಪ್ರಕಾರ, 'ಹೊಸದನ್ನು ಸೃಷ್ಟಿಸುವ ಆಂತರಿಕ ಸಾಮರ್ಥ್ಯ ಜೀವದಲ್ಲಿದೆ ಮತ್ತು ಇದರ ಪರಿಣಾಮವಾಗಿಯೇ ವಿಕಾಸದಲ್ಲಿ ಬದಲಾವಣೆ ಉಂಟಾಗುತ್ತಿರುವುದು. ಈ ಜೀವವಿಕಾಸದಲ್ಲಾಗುವ ಬದಲಾವಣೆ ವಾತಾವರಣದಲ್ಲಾಗುವ ಬದಲಾವಣೆಗೆ ಹೊಂದಿಕೆಯಾಗದೇ ಇರಬಹುದು' (Fritjof Capra, *The Web of Life*, P.226).

ಪರಿಸರದೊಡನೆ ಹೊಂದಿಕೊಂಡು ಯಾಂತ್ರಿಕವಾಗಿ ಜೀವನ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವುದನ್ನು ಬಿಟ್ಟು ಹೊಸತನ್ನು ಸೃಷ್ಟಿಸುವ, ಹೊಸಜೀವನ ವಿಧಾನವನ್ನು ಅನುಸರಿಸುವ ಆಂತರಿಕ ತುಡಿತವೇ ಮಾನವನನ್ನು ವಿಕಾಸದ ತುತ್ತ ತುದಿಗೆ ಏರಿಸಿದೆ, ನಾಗರಿಕತೆಯಲ್ಲಿ ಮುಂದುವರಿಯುವಂತೆ ಮಾಡಿದೆ. ಆದರೆ ಈ ನಾಗರಿಕತೆ ಉಳಿಯಬೇಕಾದರೆ ಮತ್ತು ಇನ್ನೂ ಮುಂದುವರಿಯಬೇಕಾದರೆ ವಿಕಾಸ ಪ್ರಕ್ರಿಯೆಯ ಇನ್ನೊಂದು ಅತಿ ಮುಖ್ಯ ಅಂಶವನ್ನು ಅವನು ಮರೆಯಬಾರದು. ಅದಾವುದೆಂದರೆ, ಸ್ವಾಮಿ ವಿವೇಕಾನಂದರು ಹೇಳುವಂತೆ, ವಿಕಾಸದ ತಳಹದಿ ಸ್ಪರ್ಧೆಯಲ್ಲ, ಸಹಕಾರ. ಪರಸ್ಪರ ಸಹಕಾರವೇ ವಿಕಾಸದ ಹಿಂದಿರುವ ಪ್ರಧಾನ ಶಕ್ತಿ ಎಂದು ಇಂದಿನ ವಿಕಾಸವಾದಿಗಳು ಹೇಳುತ್ತಿದ್ದಾರೆ. 'ನಾವೂ ಸೇರಿದಂತೆ ಎಲ್ಲ ಉನ್ನತ

**ಮೌಲ್ಯಗಳ ನೆಲೆಯನ್ನು ಹುಡುಕಲು ಅಂತರಂಗದ ಕಡೆ, ಆತ್ಮದ ಕಡೆ ತಿರುಗಬೇಕೇ ಹೊರತು ಬೇರೆಲ್ಲೂ ಅದು ದೊರಕದು.**

—ಅಬ್ರಹಾಂ ಮಾಸ್ಲೊ

ಜೀವಿಗಳು ವಿನಾಶಕ ಕ್ರಿಯೆಗಳಿಂದ ನಿಜವಾಗಿಯೂ ಒಳಿತಾಗುವುದಿಲ್ಲ ಎಂಬುದಕ್ಕೆ ಜೀವಂತ ಸಾಕ್ಷಿಯಾಗಿವೆ. ಕೊನೆಯಲ್ಲಿ ವಿಧ್ವಂಸಕರೇ ನಾಶಹೊಂದುತ್ತಾರೆ ಮತ್ತು ಸಹಕಾರದಿಂದ ಬಾಳುವವರಿಗೆ ದಾರಿ ಮಾಡಿಕೊಡುತ್ತಾರೆ. ಜೀವನವೆಂಬುದು ಉಳಿಯುವಿಕೆಯ ಸ್ಪರ್ಧಾತ್ಮಕ ಹೋರಾಟಕ್ಕಿಂತ ಮಿಗಿಲಾಗಿ ಸಹಕಾರ ಮತ್ತು ಸೃಜನಾತ್ಮಕತೆಯ ವಿಜಯ' (ಅದೇ, ೨೪೩).

ಎಲ್ಲ ಪ್ರಗತಿಯೂ ದಿವ್ಯತೆಯ ಅಭಿವ್ಯಕ್ತಿಯೆಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. 'ಈ ಆತ್ಮದ ಅನಂತ ಶಕ್ತಿಯನ್ನು ಭೌತಿಕ ಪ್ರಪಂಚದ ಮೇಲೆ ಬೀರಿದರೆ ಹಲವು ಭೌತಿಕ ಬೆಳವಣಿಗೆಗಳಾಗುವುವು ; ಆಲೋಚನಾ ಪ್ರಪಂಚದ ಮೇಲೆ ಬೀರಿದರೆ ಬುದ್ಧಿ ತನ್ನ ಪರಾಕಾಷ್ಠತೆಯನ್ನು ಮುಟ್ಟುವುದು ; ತನ್ನ ಮೇಲೆಯೇ ಅದನ್ನು ಬೀರಿಕೊಂಡರೆ ಮಾನವನನ್ನು ದೇವನನ್ನಾಗಿ ಮಾಡುವುದು'(ವ್ಯಕ್ತಿತ್ವ ನಿರ್ಮಾಣ, ಪು.೨೪) ಎಂದು ಸ್ವಾಮೀಜಿ ಹೇಳುತ್ತಾರೆ.

ಆದ್ದರಿಂದ ಈ ದಿವ್ಯತೆಯ ಅಭಿವ್ಯಕ್ತಿ ವ್ಯಕ್ತಿಗೆ ಮಾತ್ರವಲ್ಲ, ಇಡೀ ಸಮಾಜಕ್ಕೆ ಸಾರ್ಥಕತೆಯನ್ನು ನೀಡುತ್ತದೆ. ❋

# ಬುಸ್ತಾಮಿ

ಆತನ ಹೆಸರು ಬಯಾಸಿದ್ ಬುಸ್ತಾಮಿ. ಪರ್ಷಿಯಾ ದೇಶದ ಪ್ರಸಿದ್ಧರಾದ ಸಂತರಲ್ಲಿ ಒಬ್ಬ.

ಒಂದು ಸಲ, ಬುಸ್ತಾಮಿ ಒಂಟಿಯಾಗಿ ಮನೆಗೆ ಬರುತ್ತಿದ್ದ. ಅರ್ಧ ರಾತ್ರಿ ಮೀರಿತ್ತು. ದಾರಿಯಲ್ಲಿ ಒಬ್ಬ ಕುಡುಕ ತನ್ನ ತಂತೀವಾದ್ಯವನ್ನು ನುಡಿಸುತ್ತ ಅಪಸ್ವರದಲ್ಲಿ ಹಾಡುತ್ತಿದ್ದ. ದಾರಿಯಲ್ಲಿ ಬಂದವರನ್ನೆಲ್ಲ ಬಾಯಿಗೆ ಬಂದಹಾಗೆ ಬಯ್ಯುತ್ತಿದ್ದ.

ಕುಡುಕನ ವರ್ತನೆ ಬುಸ್ತಾಮಿಗೆ ಸರಿಬರಲಿಲ್ಲ. "ಹೀಗೆಲ್ಲಾ ಮಾಡುವುದು ಚೆನ್ನಾಗಿಲ್ಲ" ಎಂದು ಅವನಿಗೆ ಬುದ್ಧಿ ಹೇಳಿದ.

ಬುಸ್ತಾಮಿಯ ಬುದ್ಧಿವಾದ ಕುಡುಕನಿಗೆ ರುಚಿಸಲಿಲ್ಲ. ಅವನಿಗೆ ಅಸಾಧ್ಯ ರೋಷ ಬಂತು. ಬುಸ್ತಾಮಿಯನ್ನು ಹೊಲಸುಹೊಲಸಾಗಿ ಬಯ್ದ. ತನ್ನ ಕೈಲಿದ್ದ ವಾದ್ಯವನ್ನು ಮೇಲೆತ್ತಿ ಬುಸ್ತಾಮಿಯ ತಲೆಯ ಮೇಲೆ ಹೊಡೆದ. ಹೊಡೆದ ಏಟಿಗೆ ವಾದ್ಯ ಚೂರು ಚೂರಾಯಿತು; ಬುಸ್ತಾಮಿಯ ತಲೆ ಒಡೆದು, ಮುಖದ ಮೇಲೆ ರಕ್ತ ಹರಿಯಿತು.

ಬುಸ್ತಾಮಿ ತುಟಿ ಪಿಟಕ್ ಎನ್ನಲಿಲ್ಲ. ಮುಖದ ಮೇಲಿನ ರಕ್ತವನ್ನು ಕೈಯಿಂದ ಒರಸಿಕೊಳ್ಳುತ್ತಾ ತನ್ನದಾರಿ ಹಿಡಿದು ಮನೆಗೆ ಹೋದ. ಕುಡುಕ ಬಾಯಿ ಸೋಲುವವರೆಗೂ ಬೈಯುತ್ತಲೇ ಇದ್ದ.

ಮಾರನೆಯ ಬೆಳಗಾಯಿತು. ಬುಸ್ತಾಮಿ ತನ್ನ ಸೇವಕನನ್ನು ಕರೆದ. ಒಂದು ಬುಟ್ಟಿಯ ತುಂಬ ಮಿಠಾಯಿಗಳನ್ನು ತುಂಬಿದ. ಬುಟ್ಟಿಯನ್ನು ಸೇವಕನ ತಲೆಯ ಮೇಲಿಟ್ಟು, ಅವನ ಕೈಯಲ್ಲಿ ಕೆಲವು ನಾಣ್ಯಗಳನ್ನು ಕೊಟ್ಟ.

"ಇಂತಹ ಕಡೆ ಒಬ್ಬ ಕುಡುಕ ಇದ್ದಾನೆ. ಅವನಿಗೆ ಈ ಮಿಠಾಯಿ ಬುಟ್ಟಿಯನ್ನೂ ಈ ನಾಣ್ಯಗಳನ್ನೂ ಕೊಡು. 'ನೆನ್ನೆ ರಾತ್ರಿ ನನ್ನ ತಲೆಗೆ ತಗುಲಿ ನಿನ್ನ ವಾದ್ಯ ಚೂರುಚೂರಾಯಿತು. ದಯಮಾಡಿ ಈ ಹಣದಿಂದ ನೀನು ಹೊಸ ವಾದ್ಯ ಕೊಂಡುಕೊ. ಮತ್ತೆ ನೆನ್ನೆ ರಾತ್ರಿ ಆಡಬಾರದ ಬೈಗಳನ್ನು ಆಡಿ, ನಿನ್ನ ನಾಲಗೆ ಕೆಟ್ಟುಹೋಗಿತ್ತು. ದಯಮಾಡಿ ಈ ಮಿಠಾಯಿ ತಿಂದು, ನಾಲಗೆಯನ್ನು ಸಿಹಿ ಮಾಡಿಕೊ' ಎಂದು ನಾನು ಹೇಳಿದುದಾಗಿ ಅವನಿಗೆ ತಿಳಿಸು" ಎಂದು ಬುಸ್ತಾಮಿ ಸೇವಕನನ್ನು ಕಳಿಸಿದ.

ಸೇವಕ ಬಂದು ಕೊಟ್ಟದ್ದನ್ನು ನೋಡಿ ಕುಡುಕನಿಗೆ ತುಂಬ ಅವಮಾನವಾಯಿತು. ಪಶ್ಚಾತ್ತಾಪ ಆಯಿತು. ಕೂಡಲೆ ಅವನು ಬುಸ್ತಾಮಿಯ ಹತ್ತಿರ ಹೋಗಿ, ತಪ್ಪಾಯಿತೆಂದು ಅಡ್ಡ ಬಿದ್ದ. ಅಂದಿನಿಂದ ಕುಡಿಯುವುದನ್ನು ಬಿಟ್ಟುಬಿಟ್ಟ.

**ಪ್ರೀತಿಯೇ ಇತರರನ್ನು ಗೆಲ್ಲುವ ಪರಮಾಸ್ತ್ರ**

ಸಂಗ್ರಹ : ವಿಚಾರ ರಶ್ಮಿಯಿಂದ